170	ಉತ್ತರ ಕನ್ನಡ	ಕಾರವಾರ	66.39
171		ಕುಮಟಾ	65.22
172		ಹಳಿಯಾಳ	49.75
173		ಮುಂಡಗೋಡು	33.74
174		ಸಿದ್ದಾಪುರ	149.83
175		ಸಿಸಿ	178.22
176		ಯಲ್ಲಾಪುರ	110.38
ಒಟ್ಟು			**1025.56**
ಒಟ್ಟು			**17373.00**

1102 ಶ್ರೀ ಹ್ಯಾರಿಸ್ ಎನ್.ಎ. : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು ಕಳೆದ ಎರಡು ವರ್ಷಗಳಲ್ಲಿ ಸಂಗ್ರಹಿಸಿದ ತೆರಿಗೆಯ ಒಟ್ಟು ಮೊತ್ತ ಎಷ್ಟು;

ಆ) ಪೂರ್ಣ ಪ್ರಮಾಣದಲ್ಲಿ ಎಲ್ಲಾ ಆಸ್ತಿ ಮನೆಗಳನ್ನು ಕಂದಾಯ-ಕ್ಕೊಳಪಡಿಸುವ ದಿಶೆಯಲ್ಲಿ ಸರ್ಕಾರ ಕೈಗೊಂಡ ಪರಿಣಾಮಕಾರಿ ಕ್ರಮಗಳೇನು;

ಇ) ಕಂದಾಯಕೊಳ್ಳಪಡದೇ ಇರುವ ಮನೆಗಳು (ಆಸ್ತಿ) ಎಷ್ಟು ಎಂಬುದನ್ನು ಗುರುತಿಸಲಾಗಿದೆಯೇ; ಆ ಕುರಿತಾದ ಕ್ರಮಗಳೇನು;

ಈ) ಬಿಬಿಎಂಪಿ ವ್ಯಾಪ್ತಿಗೆ ಬರುವ ಎಲ್ಲಾ ಆಸ್ತಿಗಳ ವಿವರಗಳ ಸಂಗ್ರಹಣೆಗೆ ಸರ್ಕಾರದ ಕ್ರಿಯಾ ಯೋಜನೆಗಳೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) 2007-08 – ರೂ.449.00 ಕೋಟಿಗಳು

2008-09 – ರೂ.748.00 ಕೋಟಿಗಳು

ಆ) 2009-10ನೇ ಸಾಲಿನ ಆಸ್ತಿ ತೆರಿಗೆಯನ್ನು ಸ್ವಯಂ ಘೋಷಿಸಿಕೊಳ್ಳಲು ಆಗಸ್ಟ್ 2009ರವರೆಗೆ ಅವಕಾಶ ನೀಡಲಾಗಿದೆ. ಈ ಅವಧಿವರೆಗೂ ತೆರಿಗೆ ಪಾವತಿ ಮಾಡದೇ ಇರುವ ಸ್ವತ್ತುಗಳಿಗೆ ನಗರ ಪಾಲಿಕೆ ಸಿಬ್ಬಂದಿ ಮೂಲಕ ಕಂದಾಯ ನಿರ್ಧರಿಸಿ ವಸೂಲು ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ಸುಮಾರು 5 ಲಕ್ಷ ಆಸ್ತಿಗಳು ಕಂದಾಯಕ್ಕೆ ಒಳಪಟ್ಟಿಲ್ಲವೆಂದು ಅಂದಾಜು ಮಾಡಲಾಗಿದೆ. ಈ ಆಸ್ತಿಗಳನ್ನು ಗುರುತಿಸಿ ಆಸ್ತಿ ತೆರಿಗೆ ವ್ಯಾಪ್ತಿಗೆ

ಒಳಪಡಿಸಲು ಭೌಗೋಳಿಕ ಸಮೀಕ್ಷೆ ಹಾಗೂ ಕಂದಾಯ ಇಲಾಖೆಯ ಸರ್ವೆ ಕಾರ್ಯವು ಪ್ರಗತಿಯಲ್ಲಿ ಇರುತ್ತದೆ. ಈ ಕಾರ್ಯವು ಮುಗಿದ ನಂತರ ಎಲ್ಲಾ ಆಸ್ತಿಗಳನ್ನು ಕಂದಾಯಕ್ಕೆ ಒಳಪಡಿಸಿ ವಸೂಲು ಮಾಡಲು ಕ್ರಿಯಾ ಯೋಜನೆ ರೂಪಿಸಲಾಗಿದೆ.

551 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸಚಿವ ಸಂಪುಟದ ಸದಸ್ಯರುಗಳಿಗೆ, ಹಾಗೂ ಸಂಪುಟ ದರ್ಜೆ ಸ್ಥಾನಮಾನ ಹೊಂದಿರುವವರ ಪೈಕಿ ಎಷ್ಟು ಜನರಿಗೆ ಸರ್ಕಾರಿ ಬಂಗಲೆಗಳ ಸೌಲಭ್ಯವಿದೆ; ಎಷ್ಟು ಜನರು ಬಾಡಿಗೆ ಮನೆಗಳಲ್ಲಿ ವಾಸಮಾಡುತ್ತಿದ್ದಾರೆ; ಇವರು ವಾಸಿಸುತ್ತಿರುವ ಮನೆಗಳಿಗೆ ಮಾಸಿಕ ಎಷ್ಟು ಬಾಡಿಗೆಯನ್ನು ಪಾವತಿ ಮಾಡಲಾಗುತ್ತಿದೆ (ಸಂಪುಟ ಸದಸ್ಯರ ಹಾಗೂ ಇದೇ ಸ್ಥಾನಮಾನ ಹೊಂದಿರುವ ಎಲ್ಲರ ಪೂರ್ಣ ವಿವರಗಳನ್ನು ಒದಗಿಸುವುದು);

ಆ) ಸಂಪುಟ ಸದಸ್ಯರು ಹಾಗೂ ಇದೇ ಸ್ಥಾನಮಾನ ಹೊಂದಿರುವ ಇತರರಿಗೆ ಸರ್ಕಾರಿ ಬಂಗಲೆಗಳ ಸಮಸ್ಯೆ ಇರುವುದು ನಿಜವಲ್ಲವೇ;

ಇ) ಹಾಗಿದ್ದಲ್ಲಿ ಸರ್ಕಾರ ಸಂಪುಟದ ಎಲ್ಲಾ ಸದಸ್ಯರು ಹಾಗೂ ಇತರರು ಒಂದೇ ಕಡೆ ವಾಸ ಮಾಡಲು ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಹಾಗೂ ಮಾಸಿಕ ದುಬಾರಿ ಬಾಡಿಗೆಯನ್ನು ಪಾವತಿ ಮಾಡುವುದನ್ನು ತಪ್ಪಿಸುವ ಸಲುವಾಗಿ ಒಂದೇ ಕಡೆಗಳಲ್ಲಿ ಬಂಗಲೆಗಳನ್ನು ನಿರ್ಮಿಸುವ ಬಗ್ಗೆ ಪರಿಶೀಲಿಸುವುದೇ;

ಈ) ಸಚಿವರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಇಷ್ಟರಲ್ಲಿಯೇ ಸ್ಥಳಾಂತರಗೊಳ್ಳುತ್ತಿರುವ ಬೆಂಗಳೂರು ರೇಸ್‌ಕೋರ್ಸಿನ ಜಾಗದಲ್ಲಿ ಎಲ್ಲಾ ಸಚಿವರಿಗೂ ಬಂಗಲೆಗಳನ್ನು ನಿರ್ಮಿಸುವ ಬಗ್ಗೆ ಸರ್ಕಾರ ಚಿಂತನೆ ನಡೆಸುವುದೇ?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಸರ್ಕಾರಿ ವಸತಿಗೃಹಗಳನ್ನು ಸಚಿವರಿಗೂ ಹಾಗೂ ವಿಧಾನ ಮಂಡಲದ ಗಣ್ಯರಿಗೆ ಹಂಚಿಕೆ ಮಾಡಲು ಅವಕಾಶವಿದ್ದು, ಅದರಲ್ಲಿ 20 ಜನರಿಗೆ ಸರ್ಕಾರಿ ಬಂಗಲೆಗಳನ್ನು ನೀಡಲಾಗಿದೆ.

6 ಜನ ಸಚಿವರು ಬಾಡಿಗೆ ಮನೆಯಲ್ಲಿ ವಾಸವಿರುತ್ತಾರೆ. ಖಾಸಗಿ ಮಾಲೀಕತ್ವದ ಮನೆಗೆ ಮಾಸಿಕ ಬಾಡಿಗೆ ರೂ.40,000/–ಗಳನ್ನು ನೀಡಲಾ–ಗುತ್ತದೆ. ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.